# ಸ್ವಾಮಿ ಸರ್ವಜ್ಞಾನಂದ
## (೧೯೦೨-೧೯೮೮)

ಮೂಲ ಬಂಗಾಳಿ: ಸ್ವಾಮಿ ಚೇತನಾನಂದ                                        ಅನುವಾದ: ಕುಮಾರಿ ಪಿ. ಉಷಾ

ರಾಮಕೃಷ್ಣ ಮಿಶನ್ನಿನ ಹಿರಿಯ ಸಂನ್ಯಾಸಿಗಳಾದ ಸ್ವಾಮಿ ಸರ್ವಜ್ಞಾನಂದರು ಸರಳರೂ ಬಹುಗುಣಸಂಪನ್ನರೂ ಆಗಿದ್ದರು. ಬಡಜನರ ಉನ್ನತಿಗಾಗಿ ತಮ್ಮ ಹೃದಯಾಂತರಾಳದಿಂದ ಶ್ರಮಿಸಿದ್ದ ಅವರು ತಮಿಳುನಾಡಿನ ನಟ್ಟರಾಂಪಲ್ಲಿ ಕೇಂದ್ರದಿಂದ ಹಳ್ಳಿ-ಹಳ್ಳಿಗಳಿಗೆ ಹೋಗಿ ಉದ್ಧಾರ ಕಾರ್ಯಗಳನ್ನು ಕೈಗೊಂಡಿದ್ದರು.

ಶ್ರೀರಾಮಕೃಷ್ಣ, ಶ್ರೀಮಾತೆ ಹಾಗೂ ಸ್ವಾಮಿ ವಿವೇಕಾನಂದರ ಜೀವನ ಹಾಗೂ ಉಪದೇಶಗಳನ್ನು ಅವರು ಪುಸ್ತಕ ಹಾಗೂ ದೃಶ್ಯ-ಶ್ರಾವ್ಯ ಮಾಧ್ಯಮಗಳ ಮೂಲಕ ಹಳ್ಳಿಗಳಲ್ಲಿ ಪ್ರಚಾರ ಮಾಡಿದ್ದಾರೆ. ಸೆಪ್ಟೆಂಬರ್ ೧, ೧೯೮೬ನೆ ಇಸವಿಯಲ್ಲಿ ರಾಮೇಶ್ವರದಲ್ಲೂ, ೧೯ನೆಯ ಅಕ್ಟೋಬರ್‌ದಂದು ಬೇಲೂರು ಮಠದ ಸಾಧುಸಮ್ಮೇಳನದಲ್ಲೂ ಸರ್ವಜ್ಞಾನಂದಜಿಯವರು ಇಂಗ್ಲಿಷ್‌ನಲ್ಲಿ ತಮ್ಮ ಸ್ಮೃತಿಗಳ ಭಾಷಣ ನೀಡಿದ್ದರು. ಇವುಗಳನ್ನು ನಾನು ರೆಕಾರ್ಡ್ ಮಾಡಿಕೊಂಡಿದ್ದೆ. ಅದನ್ನು ಪರಿಷ್ಕರಿಸಿ ಬರೆದು ೧೯೯೦ರ ಅಕ್ಟೋಬರ್ ತಿಂಗಳ 'ವೇದಾಂತ ಕೇಸರಿ'ಯಲ್ಲಿ ಪ್ರಕಟಿಸಲಾಯಿತು. ನಂತರ ನಾನು ಆ ಲೇಖನವನ್ನು ಬಂಗಾಳಿಗೆ ಅನುವಾದಿಸಿದಾಗ 'ಉದ್ಬೋಧನ' ಪತ್ರಿಕೆಯಲ್ಲಿ ಅದನ್ನು ಮುದ್ರಿಸಲಾಯಿತು. ತದನಂತರ ಈ ಸ್ಮೃತಿಕಥೆಯು 'ಸ್ವಾಮಿ ಶಿವಾನಂದಕೆ ಜೇ ರೂಪ್ ದೇಖೇಛಿ' ('ನಾ ಕಂಡಂತೆ ಸ್ವಾಮಿ ಶಿವಾನಂದರು') ಅಲ್ಲಿ ಪ್ರಕಟಗೊಂಡಿತು. ಸ್ವಾಮಿ ಸರ್ವಜ್ಞಾನಂದರ ಈ ಸ್ಮೃತಿ ಲೇಖನಗಳನ್ನು ಮುಂದೆ ನೀಡಲಾಗಿದೆ:

### ಸ್ವಾಮಿ ಬ್ರಹ್ಮಾನಂದರ ಬಗೆಗಿನ ನೆನಪುಗಳು

೧೯೨೧ರಲ್ಲಿ ವಿದ್ಯಾರ್ಥಿಯಾಗಿ ಮದ್ರಾಸಿನ ರಾಮಕೃಷ್ಣ ಸ್ಟೂಡೆಂಟ್ಸ್ ಹೋಮ್-ನ್ನು ಸೇರಿದೆ. ಆಗ ಅನಂತಾನಂದರು ಅಲ್ಲಿನ ಅಧ್ಯಕ್ಷರಾಗಿದ್ದರು. ಅವರು ನನ್ನನ್ನು ಬಹಳವೇ ಪ್ರೀತಿಸುತ್ತಿದ್ದು ಶ್ರೀರಾಮಕೃಷ್ಣ ಹಾಗೂ ಸ್ವಾಮಿ ವಿವೇಕಾನಂದರ ಕುರಿತು ಅನೇಕ ವಿಷಯಗಳನ್ನು ಹೇಳುತ್ತಿದ್ದರು. ನನಗಾಗ ರಾಮಕೃಷ್ಣರ ಬಗ್ಗೆ ಹೆಚ್ಚೇನೂ ತಿಳಿದಿರಲಿಲ್ಲ. ೧೯೧೨ರಲ್ಲಿ ನಾನು ಓದುತ್ತಿದ್ದಾಗ ಒಂದು ದಿನ ಶಾಲೆಯ ಮುಖ್ಯೋಪಾಧ್ಯಾಯರ ಮನೆಯನ್ನು ಸ್ವಚ್ಛಗೊಳಿಸಲು ಹೋಗಿದ್ದೆ. ಅಲ್ಲಿ ಒಂದು ಚಿಕ್ಕಪೆಟ್ಟಿಗೆಯಲ್ಲಿ ಕೆಲವು ಚಿತ್ರಗಳು ನನ್ನ ಕಣ್ಣಿಗೆ ಬಿದ್ದವು. ಆ ಚಿತ್ರಗಳು ಯಾರವೆಂದು ಕೇಳಿದಾಗ ಮಾಸ್ತರರು, 'ಈ ಚಿತ್ರ ಶ್ರೀರಾಮಕೃಷ್ಣರ ಶಿಷ್ಯರಾಗಿದ್ದ ವಿವೇಕಾನಂದರದು' ಎಂದರು. ಅವರು ಅಮೆರಿಕದಲ್ಲಿ ಹಿಂದೂ ಧರ್ಮದ ಪ್ರಚಾರವನ್ನು ಮಾಡಿದ್ದರು. ಇಷ್ಟು ಮಾತ್ರವಲ್ಲದೆ ರಾಮಕೃಷ್ಣ- ವಿವೇಕಾನಂದರ ಬಗ್ಗೆ ನನಗಿನ್ನೇನೂ ತಿಳಿದಿರಲಿಲ್ಲ.

ಅದೇನೇ ಇರಲಿ, ನಮ್ಮ ಸ್ಟೂಡೆಂಟ್ಸ್ ಹೋಮ್‌ನ ಸೆಕ್ರೆಟರಿಗಳಾಗಿದ್ದ ರಾಮಸ್ವಾಮಿ ಅಯ್ಯಂಗಾರ್ ಒಂದು ದಿನ ನನಗೆ ಕೆಲವು ತರಕಾರಿಗಳನ್ನು ಕೊಟ್ಟು, ಮದ್ರಾಸು ಮಠದಲ್ಲಿ ಸ್ವಾಮಿ ಬ್ರಹ್ಮಾನಂದರಿಗೆ ಅವುಗಳನ್ನು ಕೊಟ್ಟು ಬರಲು ಹೇಳಿದರು. ನಾನಾಗ ಬರಿಯ ಹಳ್ಳಿ ಹುಡುಗ! ಅವರು ಕೊಟ್ಟ ಉದ್ದನೆಯ ಪಡುವಲಕಾಯಿಗಳನ್ನು ಎರಡು ಕೈಗಳಲ್ಲೂ ಹಿಡಿದು ಅವುಗಳನ್ನು ಎದೆಗವುಚಿಕೊಂಡೆ. ಅವರು ನನಗೆ ಅವುಗಳನ್ನು ಸ್ವಾಮಿ ಬ್ರಹ್ಮಾನಂದರ ಪಾದಗಳಲ್ಲಿಟ್ಟು ನಮಸ್ಕರಿಸಲು ಹೇಳಿದರು. ಬ್ರಹ್ಮಾನಂದ ಸ್ವಾಮಿಗಳ ಮೇಲಿನ ಶ್ರದ್ಧೆಗಿಂತಲೂ, ಸೆಕ್ರೆಟರಿಗಳ ಮೇಲಿದ್ದ ಭಯದಿಂದಲೇ ನಾನು ಅವುಗಳನ್ನು ತೆಗೆದುಕೊಂಡು ಹೋಗಿದ್ದೆ ಎನ್ನಬಹುದು!

ಸ್ಟೂಡೆಂಟ್ಸ್ ಹೋಮ್‌ನಿಂದ ಮಠ ಒಂದು ಮೈಲಿಯ ದೂರದಲ್ಲಿತ್ತು. ನಡೆದು ಹೋಗುತ್ತಿದ್ದಾಗ ರಸ್ತೆಯಲ್ಲಿ ಬ್ರಹ್ಮಾನಂದಜಿ ಹಾಗೂ ಶರ್ವಾನಂದಜಿಯವರನ್ನು ನೋಡಿದೆ; ಅವರು ಸ್ಟೂಡೆಂಟ್ಸ್ ಹೋಮ್‌ಗೆ ಬರುತ್ತಿದ್ದರು. (ಆಕಾಲದ ರಸ್ತೆಗಳಲ್ಲಿ ಮೋಟರು ಬಸ್ಸುಗಳು ವಿರಳ. ಸೈಕಲ್, ಎತ್ತಿನ ಗಾಡಿಗಳೆ ರಸ್ತೆಗಳಲ್ಲಿ ಹೆಚ್ಚಾಗಿ ಕಾಣಿಸಿಕೊಳ್ಳುತ್ತಿದ್ದವು.) ಈಗೇನು ಮಾಡುವುದೆಂದು ತಿಳಿಯದಾಯಿತು. ರಾಮಸ್ವಾಮಿ ಅಯ್ಯಂಗಾರರ ಮಾತುಗಳನ್ನು ಅವಹೇಳನ ಮಾಡಲು ಭಯ! ಆದ್ದರಿಂದ ದಾರಿಯಲ್ಲೆ ತರಕಾರಿಗಳ ಸಮೇತವಾಗಿ ಮಹಾರಾಜರ ಪಾದಗಳಿಗೆರಗಿ ಪ್ರಣಾಮ ಮಾಡಿದೆ. ಆದರೆ ಈಗ ಎದ್ದೇಳುವುದಾದರೂ ಹೇಗೆ? ನನ್ನ ಎರಡೂ ಕೈಗಳಲ್ಲೂ ಪಡುವಲಕಾಯಿಗಳನ್ನು ಹಿಡಿದಿದ್ದೇನಲ್ಲ! ಮಹಾರಾಜರೇ ನನ್ನ ಎರಡು ಬಾಹುಗಳನ್ನು ಹಿಡಿದು ನನ್ನನ್ನು ನಿಲ್ಲಿಸಿದರು. ನನ್ನ ಮಹಾಸೌಭಾಗ್ಯವೇ ಸರಿ! ಮಹಾರಾಜರು ನಾನು ತಿಳಿಯದಂತೆಯೆ ನನ್ನನ್ನ ಚಿರಕಾಲಕ್ಕೂ ಹಿಡಿದೆಬ್ಬಿಸಿದರೆಂದು ನನಗೆ ಈಗಲೂ ಅನ್ನಿಸುತ್ತದೆ. ಶ್ರೀರಾಮಕೃಷ್ಣರ ಮಾನಸಪುತ್ರರ ಈ ಆಶೀರ್ವಾದವನ್ನು ನಾನು ನನ್ನ ಭಕ್ತಿಯಿಂದ ಪಡೆಯಲಿಲ್ಲ; ಅದನ್ನು ನಾನು ಪಡೆದುದ್ದು ಅವರ ಹಿರಿಮೆಯಿಂದ! ತರಕಾರಿಗಳನ್ನು ಮಠಕ್ಕೆ ತಲುಪಿಸಿ ಸ್ಟೂಡೆಂಟ್ಸ್ ಹೋಮಿಗೆ ಮರಳಿ ಹೋಗಲು ಅವರು ಹೇಳಿದರು. ಜೀವನದಲ್ಲಿ ಅನೇಕ ಅನುಭವಗಳನ್ನು ಪಡೆದಿರುವೆ. ಆದರೆ ಈ

ಘಟನೆ ನನ್ನ ಮನದಲ್ಲಿ ಇನ್ನೂ ಜೀವಂತವಾಗಿದೆ – ಈಗತಾನೇ ನಡೆದಂತೆ ತೋರುತ್ತಿದೆ.

‘‘ಮಹಾರಾಜರು ಮದ್ರಾಸಿನ ಮಠದಲ್ಲಿ ದುರ್ಗಾಪೂಜೆಯನ್ನು ಆಯೋಜಿಸಿದ ವರ್ಷ ಕಲ್ಕತ್ತದಿಂದ ದುರ್ಗಾಪ್ರತಿಮೆಯನ್ನು ತರಿಸಲಾಯಿತು. ಪ್ರತಿಮೆಯ ಬೆಲೆ ೫೦೦ ರೂಪಾಯಿಗಳಾಗಿದ್ದು ಆ ಕಾಲದಲ್ಲಿ ಅದು ಹೆಚ್ಚೆಂದೇ ಹೇಳಬೇಕು. ಪೂಜೆಗಾಗಿ ಹೂವು ಕೊಯ್ಯುವುದು ಹಾಗೂ ಹಣ್ಣು–ತರಕಾರಿಗಳನ್ನು ಹೆಚ್ಚುವುದು ನನ್ನ ಪಾಲಿನ ಕೆಲಸವಾಗಿತ್ತು. ದುರ್ಗಾಪೂಜೆ ಬಹಳ ವಿಜೃಂಭಣೆಯಿಂದ ನಡೆಯಿತು. ಸ್ವಾಮಿ ಶಿವಾನಂದಜಿ ಹಾಗೂ ಠಾಕೂರರ ಅಣ್ಣನ ಮಗನಾದ ರಾಮಲಾಲ ದಾದಾ ಕೂಡ ಅದರಲ್ಲಿ ಭಾಗವಹಿಸಿದ್ದರು. ವಿಜಯದಶಮಿಯಂದು ಸ್ಟೂಡೆಂಟ್ಸ್ ಹೋಮ್‌ನಲ್ಲಿ ನೃತ್ಯ–ನಾಟಕ (‘ಜಾತ್ರಾ’) ವನ್ನೂ ಆಯೋಜಿಸಲಾಗಿತ್ತು. ಕೃಷ್ಣನ ಪಾತ್ರವನ್ನು ಅಭಿನಯಿಸಿದವನು ಹಳದಿ ಬಣ್ಣದ ಉಡುಗೆಯನ್ನು ತೊಟ್ಟು, ಶಿರದಲ್ಲಿ ಮಯೂರ–ಮುಕುಟವನ್ನು ಧರಿಸಿ, ಕೈಯಲ್ಲಿ ಕೊಳಲನ್ನು ಹಿಡಿದಿದ್ದನು.

ಕಾರ್ಯಕ್ರಮ ಮುಗಿದಾಗ ರಾಮಸ್ವಾಮಿ ಅಯ್ಯಂಗಾರರ ಬಂಧುಗಳೊಬ್ಬರು ಮೋಟರ್‌ಬೈಕ್‌ನಲ್ಲಿ ಆ ನಟನನ್ನು ಮದ್ರಾಸು ಮಠದಲ್ಲಿದ್ದ ಮಹಾರಾಜರ ಬಳಿ ಕೊಂಡೊಯ್ದರು. ನಟನು ಬಿಳಿಯ ವಸ್ತ್ರವನ್ನು ಮೈಮೇಲೆ ಹೊದ್ದು ಹಿಂದಿನ ಸೀಟಿನಲ್ಲಿ ಕುಳಿತಿದ್ದನು. ಮಠ ತಲುಪಿದಾಗ ಆ ಭಕ್ತರು ಪಕ್ಕದ ಬಾಗಿಲಿನಿಂದ ಮಹಾರಾಜರಿಗೆ ವಿಷಯವನ್ನು ತಿಳಿಸಲು ಹೋದರು. ಅದಕ್ಕೆ ಮೊದಲೇ ಮಹಾರಾಜರು ತಮ್ಮ ಕೋಣೆಯಿಂದ ಹಾಲ್‌ಗೆ ಬಂದರು. ಅಷ್ಟರಲ್ಲೆ ನಟನೂ ಎದುರಿನ ಗೇಟಿನಿಂದ ಹಾಲ್‌ಗೆ ಬಂದನು. ಕೃಷ್ಣನ ವೇಷದಲ್ಲಿದ್ದ ನಟನನ್ನು ಕಂಡೊಡನೆಯೆ ಮಹಾರಾಜರು ಅವನ ಪಾದಗಳನ್ನು ಸ್ಪರ್ಶಿಸಿ ಸಾಷ್ಟಾಂಗ ನಮಸ್ಕಾರ ಮಾಡಿದರು. ಆ ದೈವೀ ದೃಶ್ಯವನ್ನು ಕಂಡವನು ನಾನೊಬ್ಬನೆ! ಸ್ವಯಂ ಕೃಷ್ಣ ಪರಮಾತ್ಮನೇ ನಮ್ಮೆದುರು ಬಂದು ನಿಂತರೂ ನಾವು ಬಹುಶಃ ಅಂತಹ ಶ್ರದ್ಧೆಯನ್ನು ತೋರಲಾರೆವು. ಸಾಮಾನ್ಯ ನಟನೊಬ್ಬನಿಗೆ ಮಹಾರಾಜರು ಇಷ್ಟೊಂದು ಶ್ರದ್ಧೆಯನ್ನು ತೋರಬಹುದೆಂದು ನಾನೆಂದೂ ಎಣಿಸಿರಲಿಲ್ಲ! ಖಂಡಿತವಾಗಿಯೂ ಮಹಾರಾಜರು ಅವನಲ್ಲಿ ಭಗವಾನ್ ಕೃಷ್ಣನನ್ನೆ ನೋಡಿರಬೇಕು. ಈ ಘಟನೆಯು ನನ್ನ ಮನಸ್ಸಿನ ಮೇಲೆ ಗಾಢವಾದ ಪ್ರಭಾವವನ್ನು ಬೀರಿತು.

ಪ್ರತಿದಿನವೂ ಸಂಜೆ ಸಾಧು–ಭಕ್ತರೆಲ್ಲ ಭಜನೆ ಮಾಡುವುದು ರೂಢಿಯಾಗಿತ್ತು. ಮಹಾಪುರುಷ ಮಹಾರಾಜರು ತಬಲ ಬಾರಿಸುತ್ತಿದ್ದರೆ ಮಹಾರಾಜ್ ಮತ್ತು ರಾಮಲಾಲ ದಾದಾ ಎದುರುಬದುರಾಗಿ ನರ್ತಿಸುತ್ತಿದ್ದರು. ಮಹಾರಾಜರ ನೇತ್ರಗಳು ಅರ್ಧನಿಮೀಲಿತವಾಗಿರುತ್ತಿದ್ದು ಅವರು ಚಪ್ಪಾಳೆ ತಟ್ಟುತ್ತ ದೈವೀಭಾವದಲ್ಲಿ ನರ್ತಿಸುತ್ತಿದ್ದರು. ನನಗೆ ಇವೆಲ್ಲ ಅರ್ಥವಾಗುತ್ತಿರಲಿಲ್ಲ. ನಂತರ ‘ಶ್ರೀರಾಮಕೃಷ್ಣರ ವಚನವೇದ’ವನ್ನು ಓದಿದಾಗ ಇದೇ ‘ಭಾವಸಮಾಧಿ’ ಎಂದು ತಿಳಿಯಿತು.

ಮದ್ರಾಸಿನಿಂದ ೧೫ ಮೈಲು ದೂರದಲ್ಲಿ ನಾರಾಯಣಸ್ವಾಮಿ ಐಯ್ಯರ್ ಎಂಬ ಒಬ್ಬ ಭಕ್ತರಿದ್ದರು. ‘ಬ್ರಹ್ಮವಾದಿನ್’ ಪತ್ರಿಕೆಯ ಚಂದಾದಾರರಾಗಿದ್ದ ಇವರು ಶ್ರೀರಾಮಕೃಷ್ಣ ಸ್ವಾಮಿ ವಿವೇಕಾನಂದರ ಹಾಗೂ ಠಾಕೂರರ ಸಂನ್ಯಾಸಿ ಶಿಷ್ಯರುಗಳ ಬಗ್ಗೆ ತಿಳಿದಿದ್ದರು. ಅವಿವಾಹಿತರಾಗಿದ್ದ ನಾರಾಯಣ ಸ್ವಾಮಿಯವರು ತಮ್ಮ ವೃದ್ಧ ತಾಯಿಯ ಸೇವೆ ಮಾಡುತ್ತಿದ್ದರು. ತೋಟದ ಕೆಲಸ ಮಾಡಿ ತಿಂಗಳಿಗೆ ೮ರೂ.ಗಳನ್ನು ಸಂಪಾದಿಸುತ್ತಿದ್ದರು. ಶ್ರೀರಾಮಕೃಷ್ಣರನ್ನು ಸ್ಪರ್ಶಿಸಿದ್ದ ವ್ಯಕ್ತಿಯೊಬ್ಬರನ್ನು ಸ್ಪರ್ಶಿಸಬೇಕೆಂಬ ವಿಶೇಷ ಬಯಕೆ ಅವರಿಗಿತ್ತು. ೧೯೧೦ರಲ್ಲಿ ಶ್ರೀಮಾತೆಯವರು ಮದ್ರಾಸಿಗೆ ಬಂದಾಗ ಅವರನ್ನು ನೋಡಲು ತಯಾರಾಗಿದ್ದರೂ ಅವರ ಸಂಬಂಧಿಕರೊಬ್ಬರ ಮೃತ್ಯು ಸಂಭವಿಸಿದ್ದರಿಂದ ಅವರಿಗೆ ಶ್ರೀಮಾತೆಯವರಲ್ಲಿಗೆ ಹೋಗಲಾಗಲಿಲ್ಲ.

೧೯೨೧ನೆ ಇಸವಿಯಲ್ಲಿ ಸ್ವಾಮಿ ಬ್ರಹ್ಮಾನಂದರು ಮದ್ರಾಸಿಗೆ ಬಂದಾಗ ತಮ್ಮ ಇಚ್ಛೆಯನ್ನು ಪೂರೈಸಿಕೊಳ್ಳಲು ನಾರಾಯಣ ಸ್ವಾಮಿಯವರು ಮದ್ರಾಸಿಗೆ ಬಂದರು. ಮಹಾರಾಜರು ಆಗ ಸ್ಟೂಡೆಂಟ್ಸ್ ಹೋಂನಲ್ಲಿದ್ದರು. ಅಲ್ಲಿ ಮಹಾರಾಜರು ಪ್ರೇತಾತ್ಮವೊಂದರ ಉಪಸ್ಥಿತಿಯನ್ನು ಅನುಭವಿಸಿದ್ದರಿಂದ ಅಲ್ಲಿ ಪ್ರತಿದಿನವೂ ರಾಮನಾಮ ಸಂಕೀರ್ತನೆಯನ್ನು ಏರ್ಪಡಿಸಿದ್ದರು. ನಾರಾಯಣಸ್ವಾಮಿಗಳಾದರೋ ವಿನಯದ ಮೂರ್ತಿ ಸ್ವರೂಪರು. ಒಂದು ಮಧ್ಯಾಹ್ನ ೧.೩೦ಯ ಹೊತ್ತಿಗೆ ಅವರು ಸ್ಟೂಡೆಂಟ್ಸ್ ಹೋಮ್‌ನಲ್ಲಿ ಹಾಜರಾದಾಗ ಮಹಾರಾಜರು ವಿಶ್ರಾಂತಿ ತೆಗೆದುಕೊಳ್ಳುತ್ತಿದ್ದರು. ಆ ಸಮಯದಲ್ಲಿ ಮಹಾರಾಜರ ದರ್ಶನಕ್ಕಾಗಿ ಬಂದುದರಿಂದ ಮಹಾರಾಜರ ಸೇವಕರು ತಮ್ಮ ಅಸಮಾಧಾನವನ್ನು ವ್ಯಕ್ತಪಡಿಸಿದರು. ಸೇವಕರ ಮಾತುಗಳನ್ನು ಕೇಳಿ ಮಹಾರಾಜರು ನಾರಾಯಣಸ್ವಾಮಿಯವರನ್ನು ತಮ್ಮ ಬಳಿ ಕರೆತರಲು ಆದೇಶಿಸಿದರು. ನಂತರ ನಾನು ನಾರಾಯಣಸ್ವಾಮಿಯವರನ್ನು ತಾವು ಮಹಾರಾಜರನ್ನು ಕಾಣಲು ಬಂದ ವಿಷಯವಾಗಿ ಕೇಳಿದಾಗ ಅವರೆಂದರು, ‘‘ಮಹಾರಾಜರ ಕೋಣೆಯೊಳಗೆ ಕಾಲಿರಿಸಿ ನಾನು ಫಲಪುಷ್ಪಗಳನ್ನು ಅವರ ಪದತಲದಲ್ಲಿರಿಸಿ ನನ್ನ ಶಿರವನ್ನು ಅವರ ಪದಕಮಲಗಳ ಮೇಲಿರಿಸಿದೆ. ನನ್ನ ಕಣ್ಣುಗಳು ತುಂಬಿಬಂದವು. ನಾನು ಎಷ್ಟು ಸಮಯ ಹಾಗೆಯೆ ಅಲ್ಲಿದ್ದೆನೆಂದು ತಿಳಿಯದು. ಆದರೆ ನಾನು ಆನಂದಪೂರಿತನಾದೆ. ಅವರು ಠಾಕೂರರನ್ನು ಸ್ಪರ್ಶಿಸಿದ್ದರಿಂದ, ಅವರನ್ನು ಸ್ಪರ್ಶಿಸಿದಾಗ ನನ್ನ ಮನದಾಸೆ ಪೂರ್ಣಗೊಂಡಿತು. ಮಹಾರಾಜರು ತಮ್ಮ ಎರಡು ಹಸ್ತಗಳನ್ನೂ ನನ್ನ ತಲೆಯ ಮೇಲಿರಿಸಿ ಆಶೀರ್ವದಿಸುತ್ತ ಸ್ವಲ್ಪ ನಿಲ್ಲಲು ಹೇಳಿದರು. ಅವರ ಶಾಂತವದನನ್ನು ನಾನು ಕಣ್ತುಂಬ ನೋಡಿದೆ. ಬಳಿಕ ಅವರಿಗೆ ಬೆನ್ನು ಮಾಡದೆ ನಿಧಾನವಾಗಿ ಕೋಣೆಯಿಂದ ಹೊರಬಂದೆ.

ಶ್ರೀರಾಮಕೃಷ್ಣರ ಮಾನಸಪುತ್ರರ ದರ್ಶನವು ನನ್ನ ಜೀವನದ ಒಂದು ಶ್ರೇಷ್ಠ ಘಟನೆ.''

ನಾರಾಯಣ ಸ್ವಾಮಿಗಳು ಮಹಾರಾಜರ ಪಾದಗಳನ್ನು ಭಕ್ತಿಯಿಂದ ಸ್ಪರ್ಶಿಸಿದರೆ, ನಾನು ಅವುಗಳನ್ನು ಭಯದಿಂದ ಸ್ಪರ್ಶಿಸಿದ್ದೆ. ಆದರೂ ಫಲವು ಒಂದೇ ಆಗಿತ್ತು. ಶ್ರೀರಾಮಕೃಷ್ಣರು ಹೇಳಿದ್ದರು, ''ಮೆಣಸಿನಕಾಯಿಯನ್ನು ಗೊತ್ತಿದ್ದು ತಿಂದರೂ, ಗೊತ್ತಿಲ್ಲದೆ ತಿಂದರೂ ನಾಲಗೆ ಉರಿಯುತ್ತದೆ.'' ಈಗ ಜೀವನ ಸಂಧ್ಯೆಯಲ್ಲಿ ಕಳೆದುಹೋದ ದಿನಗಳ ಆ ಪವಿತ್ರ ಸ್ಮೃತಿಗಳನ್ನು ನೆನೆದರೆ ರೋಮಾಂಚವಾಗುತ್ತದೆ.

### ಸ್ವಾಮಿ ಶಿವಾನಂದರ ಬಗೆಗಿನ ನೆನಪುಗಳು

೧೯೨೧ರಲ್ಲಿ ಮದ್ರಾಸಿನ ಮಠದಲ್ಲಿ ರಾಜಾಮಹಾರಾಜರೊಂದಿಗೆ ನಾನು ಮಹಾಪುರುಷ ಮಹಾರಾಜರ ದರ್ಶನವನ್ನು ಪಡೆದೆ. ಭಜನೆ ನಡೆಯುವಾಗ ಅವರು ತಬಲ ಬಾರಿಸುತ್ತಿದ್ದರು. ಅತ್ಯಂತ ಗಂಭೀರ ಸ್ವಭಾವದವರಾದ್ದರಿಂದ ಅವರ ಬಳಿ ಹೋಗಲು ಎಲ್ಲರೂ ಸಾಹಸ ಮಾಡುತ್ತಿರಲಿಲ್ಲ. ಒಂದು ಸಲ ಸ್ವಾಮಿ ಶ್ರೀನಿವಾಸಾನಂದಜಿಯವರನ್ನು ಅವರು ಫೋಟೋ ತೆಗೆಯಲು ನಿಷೇಧಿಸಿದ್ದರು. ನಂತರ ಶ್ರೀನಿವಾಸಾನಂದಜಿ ಅವರ ಫೋಟೊ ತೆಗೆಯಲು ಹೋದಾಗಲೆಲ್ಲ ಮಹಾಪುರುಷ ಮಹಾರಾಜರು ತಲೆಯಾಡಿಸುತ್ತಿದ್ದರು.

ಬೇಲೂರು ಮಠದಲ್ಲಿ ಅವರು ಠಾಕೂರರ ಮಂದಿರದ (ಹಳೆಯ ಮಂದಿರ)ದ ಪಕ್ಕದ ಕೋಣೆಯಲ್ಲಿರುತ್ತಿದ್ದರು. ನಾನು ಒಂದು ದಿನ  ಅವರ ಕೋಣೆಯನ್ನು ನೋಡಲೆಂದು ಭಯಪಡುತ್ತಲೆ ಹೋದೆ. ಬಾಗಿಲ ಫ್ರೇಮನ್ನು ಹಿಡಿದು ಸ್ವಲ್ಪ ಇಣುಕಿ ನೋಡಿದಾಗ ಅವರು ಸಾಮಾನ್ಯವಾದ ಒಂದು ಕ್ಯಾನ್ವಾಸ್‌ನ ಕುರ್ಚಿಯಲ್ಲಿ ಕುಳಿತಿದ್ದರು. ನಾನು ಅವರಿಗೆ ಪ್ರಣಾಮ ಮಾಡಲು ಬಂದಿರುವೆನೆಂದು ಅವರಿಗೆ ತಿಳಿಯಿತು. ಹಠಾತ್ತನೆ ಅವರ ಬಾಯಿಯಿಂದ ಒಂದು ಬಗೆಯ ಶಬ್ದವನ್ನು ಮಾಡಿ ಚಪ್ಪಾಳೆ ತಟ್ಟಿದರು. ನಾನು ಹೆದರಿಕೆಯಿಂದ ಸರಸರನೆ ಮರದ ಮೆಟ್ಟಿಲುಗಳನ್ನು ಇಳಿದು ಬಂದೆ. ಹಿಂದೆ ತಿರುಗಿ ನೋಡಿದರೆ, ಮಹಾರಾಜರು ಬಾಗಿಲಿನೆದುರು ನಿಂತು ನಗುತ್ತಿದ್ದಾರೆ! ಈ ಘಟನೆಯಿಂದ ನನಗೆ ಅವರ ಮೇಲಿನ ಭಯ ಮತ್ತಷ್ಟು ಹೆಚ್ಚಿತು.

ನಾನು ಮದ್ರಾಸಿನ ಮಠದಲ್ಲಿ ಸಂಘವನ್ನು ಸೇರಿ ೧೯೨೬ರಲ್ಲಿ ಮತ್ತೆ ಮಹಾಪುರುಷಜಿಯವರನ್ನು ಕಂಡೆ. ಅವರನ್ನು ಅಭಿನಂದಿಸಲು ರುದ್ರಾನಂದ ಹಾಗೂ ನನ್ನನ್ನು ಬಿಟ್ಟು ಉಳಿದ ಸಾಧುಗಳೆಲ್ಲರೂ ಮದ್ರಾಸು ರೈಲ್ವೆ ಸ್ಟೇಷನ್ನಿಗೆ ಹೋಗಿದ್ದರು. ಅವರ ಬಗ್ಗೆ ನನಗಿದ್ದ ಹೆದರಿಕೆ ಇನ್ನೂ ಹೋಗಿರಲಿಲ್ಲ. ಮಹಾಪುರುಷಜಿಯವರು ಮಠ ತಲುಪಿದಾಗ, ನಾನು ನಿಂತಲ್ಲಿ ಮೋಟಾರು ಗಾಡಿಯಿಂದಿಳಿದು, ಒಬ್ಬ ತಾಯಿಯು ತನ್ನ ಮಗುವನ್ನು ನೋಡುವಂತೆ ವಾತ್ಸಲ್ಯದಿಂದ ನನ್ನನ್ನು ನೋಡಿದರು. ಅವರು ಸಂಪೂರ್ಣವಾಗಿ ಬದಲಾಗಿದ್ದರು. ನನ್ನ ಭಯವೆಲ್ಲ ಹೊರಟುಹೋಯಿತು.

ಪ್ರತಿದಿನವೂ ಜಪಧ್ಯಾನಗಳನ್ನು ಮುಗಿಸಿ ನಾವು ಅವರಿಗೆ ಪ್ರಣಾಮ ಮಾಡಲು ಹೋಗುತ್ತಿದ್ದೆವು. ಕೆಲವು ಸಲ ಸ್ವಲ್ಪ ಮಾತನಾಡುತ್ತಿದ್ದರು, ಕೆಲವೊಮ್ಮೆ 'ಆಲ್‌ರೈಟ್' ಎನ್ನುತ್ತಿದ್ದರು, ಹಾಗೂ ಕೆಲವೊಮ್ಮೆ ಸುಮ್ಮನಿರುತ್ತಿದ್ದರು. ಒಂದು ದಿನ ನಾನವರಿಗೆ ನಮಸ್ಕರಿಸಿದಾಗ ಅವರು ನನ್ನ ಹೆಸರನ್ನು ಕೇಳಿದರು. ನಾನು ಹೇಳಿದೆ. ಬಳಿಕ ಎರಡು ದಿನವೂ ಮತ್ತೆ ಕೇಳಿದರು. ''ನೋಡು, ನಾನು ನಿನ್ನ ಹೆಸರನ್ನು ಮರೆತುಬಿಡುತ್ತೇನೆ. ನಾನು ನಿನಗೊಂದು ಹೆಸರು ಕೊಡಲೆ?'' ನಾನು ಮೌನವಾಗಿ ನಿಂತೆ. ಇತರ ಸಾಧುಗಳು ನನಗೆ '' 'ಹ್ಞೂಂ' ಅನ್ನು'' ಎಂದರು. ಆದರೆ ನಾಚಿಕೆಯಿಂದ ನಾನು ಏನೂ ಹೇಳದಾದೆ. ಆಗ ಅವರು ಹೇಳಿದರು, ''ನಿನ್ನ ಹೆಸರು 'ಭಜಹರಿ.' ಇದರ ಅರ್ಥ ಗೊತ್ತೆ ?' –ಭಗವಂತನನ್ನು ಪೂಜಿಸು' ಎಂದು.'' ನಾನು ಮೌನವಾಗಿ ನಿಂತೇ ಇದ್ದೆ. ಇದ್ದಕ್ಕಿದ್ದಂತೆ ಅವರು 'ಭಜ ಹರಿ, ಹರಿ ಭಜ, ಭಜ ಹರಿ, ಹರಿ ಭಜ' ಎನ್ನುತ್ತ ನರ್ತಿಸಲಾರಂಭಿಸಿದರು. ಎಲ್ಲರೂ ನಗಲಾರಂಭಿಸಿದರು. ''ಇದೇ ನಿನ್ನ ಹೆಸರು'' ಎಂದರು. ಅಂದಿನಿಂದ ನನ್ನ ಹೆಸರು 'ಭಜಹರಿ' ಎಂದಾಯಿತು.

ಒಂದು ದಿನ ನಾನವರನ್ನು, ''ಮಹಾರಾಜ್, ಠಾಕೂರರು ನಿಮ್ಮ ನಾಲಗೆಯ ಮೇಲೆ ಏನೋ ಬರೆದಾಗ ಕುಂಡಲಿನಿಯ ವಿಭಿನ್ನ ಚಕ್ರಗಳಲ್ಲಿ ನೀವು ಚೈತನ್ಯವನ್ನನುಭವಿಸಿದಿರಿ ಎಂದು ಹೇಳಿದ್ದಿರಿ. ಈಗಲೂ ನಿಮಗೆ ಆ ಅನುಭವ ಆಗುತ್ತಿದೆಯೆ?'' ಎಂದು ಕೇಳಿದಾಗ ಅಲ್ಲಿದ್ದ ಎಲ್ಲರೂ ಇಂಥ ವೈಯಕ್ತಿಕ ಪ್ರಶ್ನೆಗಳನ್ನು ಕೇಳಬಾರದು ಎಂಬಂತೆ ನನ್ನನ್ನು ನೋಡತೊಡಗಿದರು. ಆದರೆ ಮಹಾಪುರುಷಜಿಯವರು, ''ಹೌದು, ಈಗಲೂ ಕೂಡ ನನ್ನ ಅನುಭವಕ್ಕೆ ಬರುತ್ತದೆ,'' ಎಂದು ಉತ್ತರಿಸಿದರು.

ಮತ್ತೊಂದು ದಿನ ಮಹಾಪುರುಷಜೀ ಹೇಳಿದರು, ''ಭಜಹರಿ, ಸ್ವಾಮಿ— ಕೆಲವು ದಿನ ನನ್ನ ಬಳಿ ಇರುವಂತೆ ನೀನು ನಟ್ರಂಪಲ್ಲಿಗೆ ಹೋಗಿ ಅವರ ಕಾರ್ಯವನ್ನು ನಿರ್ವಹಿಸು.'' ನಾನೆಂದೆ, ''ಮಹಾರಾಜ್, ನೀವು ಮದ್ರಾಸಿಗೆ ಬರುವುದು ಬಹಳ ಕಡಿಮೆ. ನಾನು ಅಲ್ಲಿಗೆ ಹೋದರೆ ನಿಮ್ಮ ಪವಿತ್ರ ಸಂಗದಿಂದ ವಂಚಿತನಾಗುವೆ. ಆದ್ದರಿಂದ ನಾನು ಹೋಗಲಿಚ್ಛಿಸುವುದಿಲ್ಲ. ನೀವು ಬೇರೊಬ್ಬರನ್ನು ಕಳುಹಿಸಿ.'' ಮಹಾರಾಜರು ನಕ್ಕರು. ನಾನು ಕೋಣೆಯಿಂದ ಹೊರಬಂದಾಗ ಅಲ್ಲಿದ್ದ ಇತರ ಸಾಧುಗಳು, ಸ್ವಂತ ಗುರು ಮತ್ತು ಸಂಘಗುರುಗಳ ಬಗ್ಗೆ ನನ್ನ ಅಸೌಜನ್ಯ ನಡವಳಿಕೆಗಾಗಿ ನನ್ನನ್ನು ಬೈದರು. ನಾನು ಮತ್ತೆ ಮಹಾಪುರುಷಜಿಯವರ ಕೋಣೆಗೆ ಹೋಗಿ ಕ್ಷಮೆ ಯಾಚಿಸುತ್ತ, ''ಮಹಾರಾಜ್, ನಾನು ನಟ್ರಂಪಲ್ಲಿಗೆ ಹೋಗುವೆ,'' ಎಂದೆ. ಅವರೆಂದರು, ''ಬೇಡ, ನೀನು ನನ್ನ ಬಳಿ ಇರು.'' ಅವರು ಸ್ವಾಮಿ ಚಿದ್ಭವಾನಂದರನ್ನು ಅಲ್ಲಿಗೆ ಕಳುಹಿಸಿದರು.

ನಾನೊಂದು ದಿನ ತೋಟದಲ್ಲಿ ಹೂ ಕೊಯ್ಯುತ್ತಿದ್ದೆ. ಕಿಟಕಿಯಿಂದ ಇದನ್ನು ನೋಡಿದ ಮಹಾಪುರುಷಜಿಯವರು ನನ್ನನ್ನು ಕರೆದು ತಮಗೂ ಕೆಲವು ಹೂಗಳನ್ನು ಕೊಡುವಂತೆ ಹೇಳಿದರು. ಸ್ವಾಮಿ ಅನಂತಾನಂದರು ನನಗೆ, 'ಠಾಕೂರರ ಪೂಜೆಯ ಹೂಗಳ ಅಗ್ರಭಾಗವನ್ನು ಯಾರಿಗೂ ಕೊಡಬೇಡ. ಪೂಜೆಯ ಹೂಗಳನ್ನು ಶರೀರ, ವಸ್ತ್ರ ಹಾಗೂ ಕೂದಲಿಗೆ ತಾಗಿಸಬಾರದು ಹಾಗೂ ಠಾಕೂರ ಮಂದಿರಕ್ಕೆ ತೆಗೆದುಕೊಂಡು ಹೋಗುವ ಮುನ್ನ ಅವುಗಳನ್ನು ತೊಳೆಯಬೇಕು' ಎಂದೆಲ್ಲ ಹೇಳಿದ್ದರೆಂದು ನಾನು ಹೂಗಳನ್ನು ಅವರಿಗೆ ಕೊಡಲು ಹಿಂಜರಿದೆ. ನನ್ನ ಮನದ ಉಭಯಸಂಕಟವನ್ನು ಗಮನಿಸಿದ ಮಹಾಪುರುಷಜಿಯವರು, ''ಭಜಹರಿ, ನಾನು ಠಾಕೂರ ಮಂದಿರಕ್ಕೆ ಹೋಗುತ್ತಿದ್ದೇನೆ. ನನಗೆ ಸ್ವಲ್ಪ ಹೂಗಳನ್ನು ಕೊಡು. ನಾನು ಠಾಕೂರರಿಗೆ ಅರ್ಘ್ಯವನ್ನು ನೀಡುವೆ,'' ಎಂದಾಗ ನಾನು ತಕ್ಷಣ ಅವರಿಗೆ ಸ್ವಲ್ಪ ಹೂಗಳನ್ನು ಕೊಟ್ಟೆ.

ಕೆಲವೊಮ್ಮೆ ಮಹಾಪುರುಷಜಿಯವರಿಗೆ ಬೆನ್ನುನೋವಾಗುತ್ತಿತ್ತು. ಅವರು ಪ್ರತಿದಿನ ನಡೆದಾಡುತ್ತಿದ್ದರು. ನೋವಿನ ಉಪಶಮನಕ್ಕಾಗಿ ಅವರು ಸ್ವಲ್ಪ ಮಸಾಜ್ ಮಾಡಲು ರಾಘವನ್‌ಗೆ ಹೇಳುತ್ತಿದ್ದರು. ಆದರೆ ಅವನ ಮಸಾಜ್‌ಅನ್ನು ಅಷ್ಟೊಂದು ಇಷ್ಟಪಡದೆ ನನಗೆ ಮಸಾಜ್ ಮಾಡಲು ಹೇಳಿದರು. ನನ್ನ ಗುರುಗಳ ವೈಯಕ್ತಿಕ ಸೇವೆಯನ್ನು ಮಾಡುವ ಪರಮ ಸೌಭಾಗ್ಯವನ್ನು ನಾನು ಪಡೆದಿದ್ದೆ.

೧೯೨೭ರಲ್ಲಿ ಸ್ವಾಮಿ ಶಾರದಾನಂದಜಿಯವರ ಸಮಾಧಿಯ ಬಳಿಕ ನಾನು ಬೇಲೂರು ಮಠವನ್ನು ದರ್ಶನ ಮಾಡಲು ಅನುಮತಿಯನ್ನು ಬೇಡಿ ಮಹಾಪುರುಷಜಿಯವರಿಗೆ ಪತ್ರವನ್ನು ಬರೆದೆ. ಅವರ ಉತ್ತರ ಹೀಗಿತ್ತು. ''ನೀನು ಅಧ್ಯಕ್ಷರಾದ ಸ್ವಾಮಿ ಯತೀಶ್ವರಾನಂದರ ಅನುಮತಿಯನ್ನು ಪಡೆದು ಬಾ.'' ಅವರು ಹೇಳಿದಂತೆ ನಾನು ಅವರ ಅನುಮತಿಯನ್ನು ಪಡೆದು ಬೇಲೂರು ಮಠಕ್ಕೆ ಹೋದೆ. ಮಹಾರಾಜರು ನನ್ನನ್ನು ಚೆನ್ನಾಗಿ ನೋಡಿಕೊಂಡರು. ಆಗ ಬೇಲೂರು ಮಠದಲ್ಲಿ ದಕ್ಷಿಣ-ಭಾರತದ ಸಾಧುಗಳು ಅತಿ ಕಡಿಮೆಯಿದ್ದರೂ ನಮಗಾಗಿ ಅವರು ರಸಂ, ಸಾಂಬಾರ್ ಹಾಗೂ ಮೊಸರಿನ ವ್ಯವಸ್ಥೆಯನ್ನು ಮಾಡಿದರು.

ಒಂದು ವರ್ಷ ವಿವಿಧ ಕೇಂದ್ರಗಳಿಂದ ಕೆಲವು ಬ್ರಹ್ಮಚಾರಿಗಳು ಸಂನ್ಯಾಸ ದೀಕ್ಷೆಗಾಗಿ ಬೇಲೂರು ಮಠಕ್ಕೆ ಬಂದಾಗ ಮಹಾಪುರುಷಜಿಯವರು ನನ್ನನ್ನು ಕೇಳಿದರು, ''ಭಜಹರಿ, ನೀನು ಸಂನ್ಯಾಸವನ್ನು ಪಡೆಯುವೆಯಾ?'' ನಾನೆಂದೆ, ''ಇಲ್ಲ ಮಹಾರಾಜ್, ಈ ವರ್ಷ ತೆಗೆದುಕೊಳ್ಳುವುದಿಲ್ಲ. ನಿಯಮಾನುಸಾರ ನನ್ನ ಸಂನ್ಯಾಸಕ್ಕೆ ಇನ್ನೂ ಒಂದೂವರೆ ವರ್ಷಗಳು ಉಳಿದಿವೆ.'' ಕೋಣೆಯಿಂದ ಹೊರಬಂದಾಗ ಸಂನ್ಯಾಸವನ್ನು ನಿರಾಕರಿಸಿದುದಕ್ಕೆ ಸ್ವಾಮಿ ಅಪೂರ್ವಾನಂದಜಿಯವರಿಂದ ಬೈಸಿಕೊಂಡೆ. ''ಈಗೇನಾದರೂ ಸಂನ್ಯಾಸವನ್ನು ಪಡೆದರೆ ಬಹಳ ಸಮಯ ಬೇಲೂರು ಮಠಕ್ಕೆ ಬರಲಾಗುವುದಿಲ್ಲ'' ಎಂದು ನಾನವರಿಗೆ ವಿವರಿಸಿದೆ.

೧೯೩೦ರಲ್ಲಿ ನಾನು ಮತ್ತೆ ಬೇಲೂರು ಮಠಕ್ಕೆ ಬಂದು ಸ್ವಾಮೀಜಿಯವರ ಜಯಂತಿಯಂದು ನನಗೆ ಸಂನ್ಯಾಸ ದೀಕ್ಷೆ ನೀಡಬೇಕೆಂದು ಪ್ರಾರ್ಥಿಸಿದೆ. ಆಗ ಮಹಾಪುರುಷಜಿಯವರು, ''ಓಹೋ! ನಿನಗೆ ಸ್ವಾಮೀಜಿಯ ಜಯಂತಿಯಂದು ಸಂನ್ಯಾಸ ಪಡೆಯುವ ಇಚ್ಛೆಯೆ? ಸರಿ. ಸ್ವಾಮೀಜಿಯ ಜನ್ಮದಿನವೂ ಠಾಕೂರರ ಜನ್ಮದಿನದಷ್ಟೆ ಪವಿತ್ರ. ಶುದ್ಧಾನಂದರ ಬಳಿ ಹೋಗಿ ನಿನ್ನ ಹೆಸರನ್ನು ಲಿಸ್ಟ್‌ನಲ್ಲಿ ಸೇರಿಸಲು ಹೇಳು.'' ನಾನು ಸ್ವಾಮಿ ಶುದ್ಧಾನಂದರ ಬಳಿ ಸಾರಿ ಹೇಳಿದಾಗ ಅವರೆಂದರು, ''ನೀನು ಸ್ವಾಮೀಜಿಯ ಜಯಂತಿಯಂದು ಸಂನ್ಯಾಸ ಪಡೆಯಬೇಕೆಂದು ಏಕೆ ಹೇಳಿದೆ? ಸಾಮಾನ್ಯವಾಗಿ ಠಾಕೂರರ ಜಯಂತಿಯಂದೆ ಸಂನ್ಯಾಸ ದೀಕ್ಷೆ ನೀಡಲಾಗುವುದು.'' ನಾನು ಮೌನವಾಗಿದ್ದೆ. ಏನೇ ಆಗಲಿ, ಸ್ವಾಮೀಜಿಯವರ ಜಯಂತಿಯಂದೇ ನನಗೆ ಸಂನ್ಯಾಸವಾಯಿತು. ಸಂನ್ಯಾಸದ ಬಳಿಕ ಪ್ರಯಾಗದಲ್ಲಿ ನಡೆಯುವ ಕುಂಭಮೇಳದಲ್ಲಿ ಭಾಗವಹಿಸಲು ನಾನು ಮಹಾಪುರುಷಜಿಯವರ ಅನುಮತಿಯನ್ನು ಕೋರಿದೆ. ''ಹೋಗಲು ಬೇಕಾದಷ್ಟು ಹಣ ನಿನ್ನಲ್ಲಿದೆಯೆ?'' ಎಂದವರು ವಿಚಾರಿಸಿದರು. ''ನನ್ನ ಬಳಿ ೧೭ ರೂ.ಗಳಿವೆ,'' ಎಂದೆ. ಆಗ ಕಲ್ಕತ್ತದಿಂದ ಅಲಹಾಬಾದಿಗೆ ಹೋಗಲು ರೈಲು ಟಿಕೇಟಿನ ಬೆಲೆ ೪ ರೂ.ಗಳು. ಮಹಾರಾಜರ ಅನುಮತಿಯನ್ನು ಪಡೆದು ನಾನು ಕುಂಭಮೇಳದಲ್ಲಿ ಪಾಲ್ಗೊಳ್ಳಲು ಹೊರಟೆ.

ಬಹಳ ವರ್ಷಗಳು ಸಂದುಹೋಗಿದ್ದರೂ ಅತ್ಯಂತ ಸ್ನೇಹಪರರಾದ ಮಹಾಪುರುಷ ಮಹಾರಾಜರು ನನ್ನ ಸ್ಮೃತಿಪಟಲದಲ್ಲಿ ಇಂದಿಗೂ ವಿರಾಜಮಾನರಾಗಿರುವರು.

### ಜೋಸೆಫೀನ್ ಮ್ಯಾಕ್ಲೌಡ್ ಅವರನ್ನು ಕುರಿತ ಸ್ಮೃತಿ

ಪ್ರಥಮ ಬಾರಿ ನಾನವರನ್ನು ಕಂಡದ್ದು ಬೇಲೂರು ಮಠದಲ್ಲಿ, ೧೯೨೭ರಲ್ಲಿ. ಅಂದು ಸ್ವಾಮೀಜಿಯವರ ಜನ್ಮದಿನವಾಗಿತ್ತು; ನಾನಾಗ ಸ್ವಾಮೀಜಿಯವರ ಕೋಣೆಯ ಜವಾಬ್ದಾರಿಯನ್ನು ವಹಿಸಿಕೊಂಡಿದ್ದೆ. ಮಿಸ್ ಮ್ಯಾಕ್ಲೌಡ್ ಹಾಗೂ ಬೋಶಿಸೇನ್‌ರ ಪತ್ನಿ ನಾನಾ ವಿಧದ ಮಾಂಸಹಾರ ಮೊದಲಾದ ಸ್ವಾದಿಷ್ಟ ಅಡಿಗೆಗಳನ್ನು ತಂದು ಅವುಗಳನ್ನು ಸ್ವಾಮೀಜಿಯವರಿಗೆ ನಿವೇದಿಸಲು ಹೇಳಿದರು. ಸ್ವಾಮೀಜಿಯವರ ಮೇಲೆ ಅಪಾರ ಭಕ್ತಿ ಅವರಿಗೆ!

೧೯೩೪ರಲ್ಲಿ ಒಮ್ಮೆ ಮಿಸ್ ಮ್ಯಾಕ್ಲೌಡ್ ಮದ್ರಾಸಿಗೆ ಬಂದರು. ಬೆಂಕಿಯಿಂದ ನೆಲಸಮವಾದ ಕಾಲೋನಿಯೊಂದರ ಪುನರ್ನಿರ್ಮಾಣ ಆಗತಾನೆ ಮುಗಿದಿತ್ತು. ಸ್ವಾಮಿ ರುದ್ರಾನಂದರು ಅದರ ಇನ್-ಚಾರ್ಜ್ ಆಗಿದ್ದರು. ೬೧ (೧೫ X ೧೫

ಅಡಿ) ಕೋಣೆಗಳನ್ನು ಕಟ್ಟಲು ಬೇಕಾದ ಹಣವನ್ನು ಅವರು ಸಂಗ್ರಹಿಸಿದ್ದರು. ಈ ಕಾಲೋನಿಯನ್ನು 'ರಾಮಕೃಷ್ಣಪುರಂ' ಎಂದು ಕರೆಯಲಾಯಿತು. ಒಂದು ದಿನ ಈ ಕಾಲೊನಿಯನ್ನು ನೋಡಲು ಬಂದ ಮಿಸ್ ಮ್ಯಾಕ್ಲೌಡ್ ಒಂದು ಕೋಣೆಯ ಒಳಗೆ ಹೋದರು. ಅವರು ಎತ್ತರವಾಗಿದ್ದು, ಕೋಣೆಗಳ ಛಾವಣಿ ಸ್ವಲ್ಪ ತಗ್ಗಿನಲ್ಲಿದ್ದುದ್ದರಿಂದ ಬ್ರಹ್ಮಚಾರಿಗಳೊಬ್ಬರು ಬಹಳ ಜಾಗ್ರತೆ ವಹಿಸಿ ಕೋಣೆಯ ಒಳಗೆ ತೋರಿಸಿದರು. ಆಗ ಅವರು, ''ಬಡ ಜನರ ಉದ್ಧಾರವೇ ಸ್ವಾಮೀಜಿಯವರ ಇಚ್ಛೆಯಾಗಿತ್ತು,'' ಎಂದು ಕಾರ್ಯವನ್ನು ಪ್ರಶಂಸಿಸಿದರು.

ಮಿಸ್ ಮ್ಯಾಕ್ಲೌಡ್ ಸಾಧಾರಣವಾಗಿ ಆರು ತಿಂಗಳು ಅಮೆರಿಕದಲ್ಲೂ, ಆರು ತಿಂಗಳು ಭಾರತದಲ್ಲೂ ಇರುತ್ತಿದ್ದರು. ಮತ್ತೊಂದು ಬಾರಿ ಆಕೆ ಕಲ್ಕತ್ತೆಗೆ ಹೋಗುವಾಗ ಮದ್ರಾಸಿಗೆ ಬಂದಿದ್ದರು. ಮದ್ರಾಸಿನ ಬಂದರಿನಿಂದ ಟ್ಯಾಕ್ಸಿಯಲ್ಲಿ ಮಠಕ್ಕೆ ಬಂದು ತಲುಪಿದಾಗ ಮಧ್ಯಾಹ್ನ ಸುಮಾರು ೧.೩೦ರ ಸಮಯ. ರಾಮಕೃಷ್ಣರ ಮಂದಿರದ ಬಾಗಿಲು ಮುಚ್ಚಿತ್ತು. ಪೂಜಾರಿಯು ಠಾಕೂರರನ್ನು ಹಾಸಿಗೆಯಲ್ಲಿ ಶಯನಗೊಳಿಸಿದ್ದರು. ಮಿಸ್ ಮ್ಯಾಕ್‌ಲೌಡ್ ಅಧ್ಯಕ್ಷರಾಗಿದ್ದ ಸ್ವಾಮಿ ಶರ್ವಾನಂದರಿಗೆ ಹೇಳಿದರು, 'ನಾನು ಸ್ವಾಮೀಜಿಯವರ ಕೋಣೆಗೆ ಹೋಗಬೇಕು.' ಠಾಕೂರರ ಮಂದಿರದ ಪಕ್ಕದಲ್ಲೆ ಅವರ ಕೋಣೆ. ಸ್ವಾಮಿ ಶರ್ವಾನಂದರು ವಿನಯಪೂರ್ವಕವಾಗಿ ಹೇಳಿದರು, ''ಸ್ವಾಮೀಜಿಯವರು ಈಗ ವಿಶ್ರಮಿಸುತ್ತಿದ್ದಾರೆ. ನೀವು ೪ ಗಂಟೆಯವರೆಗೆ ಕಾಯಬೇಕಾಗುವುದು.'' ಮಿಸ್ ಮ್ಯಾಕ್‌ಲೌಡ್ ಹೇಳಿದರು, ''ಅರ್ಥವಿಲ್ಲದ ಮಾತು! ಸ್ವಾಮೀಜಿ ವಿಶ್ರಮಿಸುತ್ತಿರುವರೆ? ಅವರೇನಾದರೂ ಈಗ ಜೀವಿಸಿದ್ದಿದ್ದರೆ ಬಂದರಿಗೆ ಬಂದು ನನ್ನನ್ನು ಸ್ವಾಗತಿಸುತ್ತಿದ್ದರು! ಈಗಲೇ ಬಾಗಿಲು ತೆರೆಯಿರಿ.'' ಅಸಹಾಯಕರಾದ ಸ್ವಾಮಿ ಶರ್ವಾನಂದರು ಸ್ವಾಮೀಜಿಯವರ ಕೋಣೆಯ ಬಾಗಿಲನ್ನು ತೆರೆಯಲು ಸಾಧುಗಳೊಬ್ಬರಿಗೆ ಹೇಳಿದರು. ನಾನು ಸ್ವಾಮೀಜಿಯವರ ಭಾವಚಿತ್ರವನ್ನು ದಿಂಬಿನ ಮೇಲೆರಿಸಿದೆ. ಮಿಸ್ ಮ್ಯಾಕ್‌ಲೌಡ್ ಸ್ವಾಮೀಜಿಯವರ ಹಾಸಿಗೆಯ ಮೇಲೆ ಕುಳಿತು ಸ್ವಲ್ಪ ಹೊತ್ತು ಧ್ಯಾನ ಮಾಡಿದರು. ಬಳಿಕ ಬಂದರಿನಲ್ಲಿದ್ದ ತಮ್ಮ ಹಡಗಿಗೆ ತೆರಳಿದರು.''

### ಸಿಸ್ಟರ್ ಕ್ರಿಸ್ಟೀನ್‌ರ ಬಗೆಗಿನ ಸ್ಮೃತಿ

ಸಿಸ್ಟರ್ ಕ್ರಿಸ್ಟೀನ್‌ರನ್ನು ನಾನು ಕಂಡದ್ದು ಮದ್ರಾಸಿನಲ್ಲಿ. ಯಾವ ವರ್ಷವೆಂಬುದು ನನಗೆ ಸರಿಯಾಗಿ ನೆನಪಿಲ್ಲ. ಅವರು ಸಹಸ್ರದ್ವೀಪೋದ್ಯಾನದಲ್ಲಿ ಸ್ವಾಮೀಜಿಯವರ ಉಪದೇಶಗಳನ್ನು ಕೇಳಿದ್ದರೆಂದು ನನಗೆ ತಿಳಿದಿತ್ತು. ''ಸಿಸ್ಟರ್, ವೇದಾಂತ ದರ್ಶನದ ತಿರುಳಾದ 'ಸ್ಫೂರ್ತಿವಾಣಿ' (Inspired Talks) ಯನ್ನು ಪಾಶ್ಚಾತ್ಯರಾದ ನೀವು ಹೇಗೆ ದಾಖಲಿಸಿದಿರಿ?[೧] ಶಂಕರರ ವೇದಾಂತವನ್ನು ಅರ್ಥಮಾಡಿಕೊಳ್ಳಲು ಹಲವು ಮಂದಿ ದಾರ್ಶನಿಕರ ಅಭಿಪ್ರಾಯ ತಿಳಿಯುವುದು ಅಗತ್ಯ. ಶಂಕರಾಚಾರ್ಯರು ಏನನ್ನು ಖಂಡಿಸುತ್ತಾರೆ ಎಂದು ತಿಳಿಯಲು ಇದು ಅಗತ್ಯ. ಭಾರತೀಯರಾದ ನಮಗೆ ನಮ್ಮ ಧರ್ಮ ಹಾಗೂ ದರ್ಶನಗಳ ಬಗ್ಗೆ ಸ್ವಲ್ಪ ಮಟ್ಟಿಗೆ ತಿಳಿದಿದ್ದರೂ ವೇದಾಂತ ದರ್ಶನವನ್ನು ತಿಳಿದುಕೊಳ್ಳುವುದು ಕಠಿಣವೆನಿಸುತ್ತದೆ. ಸ್ವಾಮೀಜಿಯವರು ಸಹಸ್ರ ದ್ವೀಪೋದ್ಯಾನದಲ್ಲಿ ವೇದಾಂತದ ಬಗ್ಗೆ ಮಾಡಿದ್ದ ಚರ್ಚೆಯನ್ನು ನೀವು ಹೇಗೆ ತಾನೆ ಅರ್ಥಮಾಡಿಕೊಂಡಿರಿ?'' ಎಂದು ನಾನವರನ್ನು ಕೇಳಿದ್ದೆ.

ಸಿಸ್ಟರ್ ಕ್ರಿಸ್ಟೀನ್ ಹೀಗೆ ಹೇಳಿದ್ದರು, ''ನೀವು ಅಜ್ಞಾನಿಗಳಂತೆ ಮಾತನಾಡುತ್ತಿರುವಿರಿ. ನಮಗೆ ವೇದಾಂತವನ್ನು ತಿಳಿಯ ಹೇಳಿದವರು ಯಾರೆಂಬುದು ನಿಮಗೆ ತಿಳಿಯದೆ? ನಮಗೆ ವೇದಾಂತವನ್ನು ಸ್ವತಃ ಸ್ವಾಮೀಜಿಯವರೇ ಕಲಿಸಿದರು. ತಮ್ಮ ಮಾತುಗಳು ನಮಗರ್ಥವಾಗುವಂತೆ ನಮ್ಮ ಮನಸ್ಸನ್ನು ಉಚ್ಚಸ್ತರಕ್ಕೆ ಕೊಂಡೊಯ್ಯುತ್ತಿದ್ದರು. ಆದ್ದರಿಂದಲೆ ನಾವು ಅವರ ಉಪದೇಶಗಳೆಲ್ಲವನ್ನೂ, ಭಾಷಣಗಳೆಲ್ಲವನ್ನೂ ಗ್ರಹಿಸಲು ಸಮರ್ಥರಾದೆವು.''

*ಮೂಲ ಬಂಗಾಳಿ ಕೃತಿ: **ಪ್ರಾಚೀನ ಸಾಧುದೇರ್ ಕಥಾ***

---

೧ ಸ್ವಾಮೀಜಿಯವರ ಶಿಷ್ಯೆ ಎಸ್.ಇ. ವಾಲ್ಡೊ ಸ್ವಾಮೀಜಿಯವರ ಸಹಸ್ರ ದ್ವೀಪೋದ್ಯಾನದ ತರಗತಿಗಳ ನೋಟ್ಸ್ ಮಾಡಿಕೊಂಡಿದ್ದರು. ನಂತರ ಅದು ಚೆನ್ನೈ ಮಠದಿಂದ 'Inspired Talks' ಎಂಬ ಪುಸ್ತಕವಾಗಿ ಪ್ರಕಟವಾಯಿತು.

## ಎಲ್ಲವೂ ಪ್ರತಿಬಿಂಬಗಳೇ

ಒಬ್ಬ ತಮಾಷೆಗಾಗಿ ತನ್ನ ಕೋಣೆಯೊಳಗೆಲ್ಲ ಬರೀ ಕನ್ನಡಿಗಳನ್ನು ಇಟ್ಟ. ಎಲ್ಲಿ ನೋಡಿದರೂ ಕನ್ನಡಿಯೇ. ಬಾಗಿಲು ಮುಚ್ಚಿ, ದೀಪ ಹಚ್ಚಿ ಎಲ್ಲೆಲ್ಲೂ ತನ್ನ ಪ್ರತಿಬಿಂಬವನ್ನು ನೋಡಿ ಸಂತಸಪಟ್ಟ. ಬಳಿದ ಕೋಣೆಯನ್ನು ಬಿಟ್ಟು ಹೋದ. ಹೋಗುವಾಗ ಬಾಗಿಲು ಹಾಕಲು ಮರೆತ. ಸ್ವಲ್ಪ ಹೊತ್ತಿನ ನಂತರ ಅವನ ನಾಯಿ ಆ ಕೋಣೆಯನ್ನು ಸೇರಿತು. ಎಲ್ಲೆಡೆ ತನ್ನ ಪ್ರತಿಬಿಂಬಗಳನ್ನು ಕಂಡು ಅದು ಬೊಗಳಲು ಪ್ರಾರಂಭಿಸಿತು. ಎಲ್ಲ ನಾಯಿಗಳೂ ತನ್ನನ್ನು ನೋಡಿ ಬೊಗಳುತ್ತಿವೆ ಎಂದು ಈ ನಾಯಿ ಜಿಗಿದಾಡುತ್ತ, ಕನ್ನಡಿಗಳನ್ನು ಒಡೆದು ಹಾಕಿ, ನಿತ್ರಾಣವಾಗುವವರೆಗೆ ಹೊಡೆದಾಡಿ ಸತ್ತುಹೋಯಿತು.

ಮನುಷ್ಯನು ಇದೇ ರೀತಿ ತನ್ನ ಬಂಧುಬಾಂಧವರೊಡನೆ ಹೊಡೆದಾಡುತ್ತಾನೆ. ಅವರೆಲ್ಲ ಸ್ವತಃ ತನ್ನ ಸ್ವರೂಪರೇ, ತನ್ನ ಪ್ರತಿಬಿಂಬವೇ ಎಂದು ಅವನು ಅರಿಯನು. ಇದೇ ಅಜ್ಞಾನದಿಂದಾಗುವ ಅನಾಹುತ.

*'ಸ್ವಾಮಿ ರಾಮದಾಸರು ಹೇಳಿದ ಕಥೆಗಳು' ಗ್ರಂಥದಿಂದ*